

# ಮಳೆಗಾಳಿ

■ **ಕರವೀರಪ್ರಭು ಕ್ಯಾಲಕೊಂಡ**

ಕಲೆ: ಸಂತೋಷ್ ಸಸಿಹಿತ್ಲು

ಮೋಡವು ಮುಸುಕಿದ ಸಂಜೆಯ ಸಮಯದಿ
ಒಮ್ಮೆಲೆ ಎದ್ದಿತು ಗಾಳಿ
ಗಿರಿಗಿರಿ ಗಿರಿಗಿರಿ ತಿರುಗಲು ಗಾಳಿಯು
ಮುಗಿಲನು ಮುಟ್ಟಿತು ದೂಳು

ತೆಂಗಿನ ಕಂಗಿನ ತಾಳೆಯ ಬಾಳೆಯ
ಎಲೆಗಳು ತೂಗಿವೆ ಬಾಗಿ
ಹಾರಿತು ಹುಲ್ಲು ಮಾಳಿಗೆ ಹಂಚು
ಗಾಳಿಯು ಬೀಸಲು ಸಾಗಿ

ಮಡ್ಡಿಗೆ ಮೇಯಲು ಹೋದ ಹಸುಗಳು
ಓಡುತ ಬಂದವು ಕಂಗೆಟ್ಟು
ಕಣ್ಣ ಮುಂದಿನದೆ ಕಾಣದಾಯಿತು
ಎಲ್ಲಡೆ ದಟ್ಟನ ದೂಳಿಟ್ಟು.

ಇದನು ನೋಡುತ ಅವಸರದೋಡಿತು
ಜನತೆ ತಮ್ಮಯ ಮನೆಯತ್ತ
ಗುಡುಗುಡು ಮುತ್ತಾ ಗುಡುಗಲು ಗುಡಿಗಿ
ಮಳೆಯನು ಸುರಿಸಿದ ಮಿಂಚುತ್ತ.

■

## ಕುಂಚ ಪ್ರಪಂಚ



**ಎಚ್.ಎನ್. ನಲ್ಮೆ**
4ನೇ ತರಗತಿ,
ನಿಜಲಿಂಗಪ್ಪ ಅಂತರರಾಷ್ಟ್ರೀಯ
ಶಾಲೆ, ಹೊಸದುರ್ಗ







**ಧ್ರುವ್ ವಿಸ್ಮಯ್**
1ನೇ ತರಗತಿ,
ರಾಷ್ಟ್ರೋತ್ಥಾನ ವಿದ್ಯಾ
ಕೇಂದ್ರ, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in